



ಪ್ರಸ್ತುತ
ಅಕ್ಷರ ದಾಮ್ಲೆ
ಮನಃಶಾಸ್ತ್ರಜ್ಞ
vveditoped@gmail.com

# ಕಳಕೊಂಡವರ ದುಃಖ ನಮ್ಮದಾಗದಿರಲಿ!

**ಇಂದು ಅಂತಾರಾಷ್ಟ್ರೀಯ ಮಾನಸಿಕ ಆರೋಗ್ಯ ದಿನ ಮನುಷ್ಯನಿಗೆ ದೈಹಿಕ ಆರೋಗ್ಯದಂತೆ ಮಾನಸಿಕ ಆರೋಗ್ಯವೂ ಬಹಳ ಮುಖ್ಯ. ಯಾರು ಸಮಚಿಂತದಿಂದ ಯೋಚಿಸುತ್ತಾರೋ ಅವರು ಎಂತಹ ಸನ್ನಿವೇಶವನ್ನಾದರೂ ನಿಭಾಯಿಸಬಲ್ಲರು.**

'ನಾನು ಇನ್ನು ಯಾಕೆ ಬದುಕಿರಬೇಕು? ನಾನು ಇದ್ದು ಯಾರಿಗೆ ಏನು ಲಾಭ ಇದೆ? ನಾನು ಸತ್ತರೆ ಅಳುವವರಾರು? ನಾನು ಇದ್ದು ಏನು ಮಾಡಬೇಕಾಗಿದೆ?'...ಇದು ವಿಷವನ್ನು ಕುಡಿದು ಆಮೇಲೆ ತನ್ನ ಚಿಕ್ಕಪ್ಪನಲ್ಲಿ ಆ ಯುವಕ ಬಂದು ಹೇಳಿದ ಮಾತು. ಅವನ ಜೀವನದಲ್ಲಿ ಹೇಳುವಂತಹ ಯಾವುದೇ ದುರ್ಘಟನೆಯೂ ಸಂಭವಿಸಿರಲಿಲ್ಲ. ಕಿತ್ತು ತಿನ್ನುವಂತಹ ಕಷ್ಟವೂ ಇರಲಿಲ್ಲ. ತಂದೆ ತಾಯಿಗೆ ಒಬ್ಬನೇ ಮಗ. ಚಿಕ್ಕಪ್ಪನಿಗೆ ಹುಡುಗ ಏನೋ ಹುಡುಗಾಟಿಕೆಯ ಮಾತುಗಳನ್ನಾಡುತ್ತಿದ್ದಾನೆ ಎಂದೇ ತೋರಿತ್ತು. ವಿಷ ಕುಡಿದು ಬಂದು ಮಾತನಾಡುತ್ತಿದ್ದೇನೆ ಅಂತ ಆತ ಹೇಳುವಾಗ ಸಮಯ ಕೈಮೀರಿ ಹೋಗಿತ್ತು. ಆಮೇಲೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಮಾಡಿದ ಪ್ರಯತ್ನ ವ್ಯರ್ಥವಾಯಿತು. ಆತನ ತಾಯಿಯ ಆಕ್ರಂದನ ಮುಗಿಲು ಮುಟ್ಟಿತ್ತು. ಹಸನ್ಮುಖಿಗಳಾಗಿರುತ್ತಿದ್ದ ದಂಪತಿಯ ಮುಖದಲ್ಲಿ ಪುತ್ರಶೋಕದಿಂದ ಕಾರ್ಮೋಡದ ಛಾಯೆ ಆವರಿಸಿತ್ತು. ವಯಸ್ಸಿಗೆ ಬಂದಿದ್ದ ಮಗನಿಗೆ ಮದುವೆ ಮಾಡಿ ತುಂಬು ಸಂಸಾರವನ್ನು ಹೊಂದಿ ಖುಷಿಯಿಂದ ಜೀವನ ಮಾಡುವ ಕನಸು ಬತ್ತಿ ಹೋಗಿತ್ತು.

ಇದು ಕೇವಲ ಒಂದು ಕುಟುಂಬದ ಕಥೆಯಲ್ಲ. ಭಾರತದಲ್ಲಿ ಪ್ರತಿ ವರ್ಷ ಇದೇ ರೀತಿ ಲಕ್ಷಾಂತರ ಕುಟುಂಬಗಳ ಕನಸುಗಳು ಕಣ್ಮರೆಯಾಗುತ್ತಿವೆ. ಅಧಿಕೃತ ವಿಶ್ವ ಆರೋಗ್ಯ ಸಂಸ್ಥೆಯ 2016ರ ಅಂಕಿಅಂಶದ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ 2.3 ಲಕ್ಷ ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಭಾರತ ಸರಕಾರದ ಅಧಿಕೃತ ಮಾಹಿತಿ ಇರುವುದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಬಳಿ. ಅದರ ಪ್ರಕಾರ ಅಂಕಿ ಅಂಶಗಳು ಇನ್ನೂ 2015ರ ಪ್ರಕಾರವಷ್ಟೇ ಲಭ್ಯವಿದೆ.

**ಅಂಕಿ ಸಂಖ್ಯೆಗಳ ಪ್ರಕಾರ;** ಸರಕಾರೀ ದಾಖಲೆಗಳನ್ನೇ ಆಧಾರವಾಗಿಟ್ಟುಕೊಂಡು ನೋಡಿದಾಗ, ಸುಮಾರು 34 ಶೇಕಡಾ ಜನರು ಕೌಟುಂಬಿಕ ಸಮಸ್ಯೆಗಳಿಂದ (ದಾಂಪತ್ಯ ವಿರಸದ ವಿಚಾರಗಳನ್ನು ಹೊರತುಪಡಿಸಿ) ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಅನಾರೋಗ್ಯದ ಸಮಸ್ಯೆ ಆತ್ಮಹತ್ಯೆಗೆ ಮೂರನೇ ಕಾರಣ (15.8%). ಅಂದರೆ ಈ ಎರಡು ಕಾರಣಗಳೇ ಸುಮಾರು 51 ಶೇಕಡಾದಷ್ಟು ಜೀವಹಾನಿಗೆ ಕಾರಣವಾಗುತ್ತಿವೆ.

ಇನ್ನೂ ಸ್ವಲ್ಪ ಆಳವಾಗಿ ನೋಡಿದಾಗ, ಹೆಚ್ಚಿನ ಆತ್ಮಹತ್ಯೆಯ ಪ್ರಕರಣಗಳು 18 ವರ್ಷದಿಂದ 45 ವರ್ಷ ವಯೋಮಾನದಲ್ಲಿ ನಡೆಯುತ್ತಿದೆ. ಅಂದರೆ ಒಬ್ಬ ವ್ಯಕ್ತಿಯು ತನ್ನ ಜೀವನದ ಬಹು ಉತ್ತಮ ಘಟ್ಟದಲ್ಲಿ ಇರಬೇಕಾದಂತ ಸಂದರ್ಭದಲ್ಲಿ ಜೀವ ಕಳೆದುಕೊಳ್ಳುವುದು ಎಂದರೆ ಅದು ಅವರ ಕುಟುಂಬಕ್ಕೆ ಮತ್ತು ದೇಶಕ್ಕೆ ಒಂದು ದೊಡ್ಡ ನಷ್ಟ. ಒಬ್ಬ ವ್ಯಕ್ತಿಯ ಜೀವ ಹಾನಿಯು ಇತರ ಅನೇಕರ ಮೇಲೆ ಬಹಳ ದೊಡ್ಡ ಮಾನಸಿಕ ಆಘಾತವನ್ನು ಕೊಡುವುದಲ್ಲದೆ ಇತರ ಅನೇಕ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಅದೂ ಕೂಡಾ 30-45 ವರ್ಷದ ವ್ಯಕ್ತಿಗಳಲ್ಲಿ ಅನೇಕರಿಗೆ ಮಕ್ಕಳಿರುತ್ತಾರೆ. ಆ ಮಕ್ಕಳ ಮೇಲೂ ಮಾನಸಿಕವಾಗಿ, ಆರ್ಥಿಕವಾಗಿ ಪರಿಣಾಮ ಆಗುತ್ತದೆ.

ವಿಶ್ವದಲ್ಲಿ ಪ್ರತಿ ವರ್ಷ 8 ಲಕ್ಷಕ್ಕೂ ಅಧಿಕ ಜನ ಆತ್ಮಹತ್ಯೆಗೆ ಶರಣಾಗುತ್ತಾರೆ. ದಕ್ಷಿಣ ಏಷ್ಯಾದಲ್ಲೇ ಆತ್ಮಹತ್ಯೆಗಳ ಸಂಖ್ಯೆಗಳಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಹೀಗಿರುವಾಗ ಈ ದೊಡ್ಡ ಸಮಸ್ಯೆಯನ್ನು ನಿಯಂತ್ರಿಸುವುದು ಮತ್ತು ತಡೆಯುವುದು ಬಹಳ ಅಗತ್ಯ. ಹಾಗಾಗಿಯೇ ಬಹುಶಃ ಸೆ.10ನೇ ತಾರೀಕಿನಂದು ಪ್ರತಿ ವರ್ಷ ಆತ್ಮಹತ್ಯೆ ತಡೆಗಟ್ಟುವ ದಿನವನ್ನು ಆಚರಿಸುವುದರ ಜೊತೆಗೆ, ಈ ವರ್ಷ, ಅ.10ರಂದು ಆಚರಿಸುವ ವಿಶ್ವ ಮಾನಸಿಕ ಆರೋಗ್ಯ ದಿನದ ಮುಖ್ಯ ವಿಷಯವನ್ನಾಗಿ ಆತ್ಮಹತ್ಯೆ ತಡೆಗಟ್ಟುವುದನ್ನು ಆಯ್ಕೆಮಾಡಿ ಕೊಂಡಿರುವುದು. ಇದಕ್ಕೆ ಇನ್ನೂ ಒಂದು ಮುಖ್ಯ ಕಾರಣ ಇದೆ. ಅದೇನೆಂದರೆ ಮಾನಸಿಕ ಅನಾರೋಗ್ಯ ಅಥವಾ ಅಸಮತೋಲನ ಹಾಗೂ ಆತ್ಮಹತ್ಯೆಗೆ ಬಹಳ ನಿಕಟವಾದ ಸಂಬಂಧವಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಹೆಚ್ಚಿನ ಬಾರಿ ಆತ್ಮಹತ್ಯೆ ಮಾಡಿಕೊಂಡವರು ಒಂದೋ ಖಿನ್ನತೆ ಅಥವಾ ಮಾದಕವಸ್ತುಗಳ ವ್ಯಸನಗಳಿಗೆ ಒಳಗಾಗಿರುತ್ತಾರೆ. ಹಾಗಾಗಿ ಆತ್ಮಹತ್ಯೆಯನ್ನು ತಡೆಗಟ್ಟಬೇಕಾದರೆ ಮಾನಸಿಕ ಆರೋಗ್ಯವನ್ನು ಕಾಪಾಡುವುದು ಬಹಳ ಅನಿವಾರ್ಯ.

ತಡೆಗಟ್ಟುವ ಯೋಜನೆ: ಈ ನಿಟ್ಟಿನಲ್ಲಿ ಕಾರ್ಯನಿರತವಾಗಿರುವ ವಿಶ್ವ ಆರೋಗ್ಯ ಸಂಸ್ಥೆಯು ಆತ್ಮಹತ್ಯೆಯನ್ನು ತಡೆಗಟ್ಟುವುದಕ್ಕೆ 4 ಹಂತದ ವಿಧಾನಗಳನ್ನು ತಿಳಿಸಿದ್ದಾರೆ. ಅವುಗಳೆಂದರೆ,

- ಕಣ್ಗಾವಲು,
- ಅಪಾಯಗಳು ಮತ್ತು ರಕ್ಷಣಾತ್ಮಕ ಅಂಶಗಳ ಗುರುತಿಸುವಿಕೆ,
- ತಡೆಗಟ್ಟುವ ಉಪಾಯಗಳ ರಚನೆ ಮತ್ತು ಮೌಲ್ಯಮಾಪನ,
- ಅನುಷ್ಠಾನ

ಈ ನಾಲ್ಕೂ ಹೆಜ್ಜೆಗಳಲ್ಲಿ ಭಾರತ ಬಹಳ ಹಿಂದಿದೆ. ಇದಕ್ಕೆ ಕಾರಣಗಳು ಹಲವಾರು.

ಮೊದಲನೆಯದು, ಭಾರತದ ಜನಸಂಖ್ಯೆ! ಇಷ್ಟೊಂದು ಜನಸಂಖ್ಯೆ ಇರುವ ದೇಶದಲ್ಲಿ ಪ್ರತಿಯೊಬ್ಬರ ಮೇಲೆ ನಿಗಾ ಇಡುವುದು ಕಷ್ಟಸಾಧ್ಯ. ಯಾರಾ ಮನಸ್ಥಿತಿ ಯಾವ ರೀತಿ ಇದೆ ಎಂದು ನಿರ್ದಿಷ್ಟ ಅವಧಿಗೊಮ್ಮೆ ಯಾದರೂ ಪರೀಕ್ಷಿಸುವುದು ಅಷ್ಟೊಂದು ಸುಲಭದ ಮಾತಲ್ಲ.

ಎರಡನೆಯ ಅಂಶಕ್ಕೆ ಬರೋಣ. ಭಾರತದಲ್ಲಿ ಅಪಾಯಗಳನ್ನು ಬಾಹ್ಯ ರೀತಿಯಲ್ಲಿ ನೋಡಿಯಾಗಿದೆ. ಆದರೆ ಅವುಗಳ ಆಳಕ್ಕೆ ಇಳಿದು ಇನ್ನೂ ಸಮರ್ಪಕವಾದ ಅಧ್ಯಯನಗಳು ನಡೆದಿಲ್ಲ. ಉದಾಹರಣೆಗೆ, ದಾಖಲೆಗಳ ಪ್ರಕಾರ ನಗರ ಪ್ರದೇಶಗಳಲ್ಲಿ ಆತ್ಮಹತ್ಯೆಯ ಪ್ರಮಾಣ ಜಾಸ್ತಿ ಇದೆ. ಇದಕ್ಕೆ ಕಾರಣಗಳೇನು, ಯಾಕೆ ಹೀಗಾಗುತ್ತಿದೆ ಎಂಬುದಕ್ಕೆ ನಮ್ಮಲ್ಲಿ ವೈಜ್ಞಾನಿಕ ಅಧ್ಯಯನಗಳಿಲ್ಲ. 'ಇತರೆ' ಕೌಟುಂಬಿಕ ಸಮಸ್ಯೆಗಳಿಂದಾಗಿ ಅತೀ ಹೆಚ್ಚು ಜನರು ಜೀವ ಹಾನಿ ಮಾಡಿಕೊಳ್ಳುತ್ತಿದ್ದಾರಾದರೂ, ಆ ಇತರೆ ಕಾರಣಗಳೇನು ಎಂಬುದು ಸ್ಪಷ್ಟವಾಗಿಲ್ಲ. ಅಂಕಿ ಅಂಶಗಳ ಪ್ರಕಾರ 2015 ರಲ್ಲಿ 26087 ಮಂದಿಗಳು 'ಇತರೆ ಕಾರಣಗಳಿಂದಾಗಿ' ಜೀವ ಕಳೆದುಕೊಂಡಿದ್ದಾರೆ. ಆದರೆ ಈ ಇತರೆ ಕಾರಣಗಳು ಯಾವುವು ಎಂಬುದು ಎಲ್ಲೂ ನಮೂದಿಸಿಲ್ಲ.

ಅಂದರೆ ನಾವು ಬಹಳ ಮೇಲ್ಮಟ್ಟದಲ್ಲಿ ಅಂಕೆ-ಸಂಖ್ಯೆಗಳನ್ನು ಇಟ್ಟುಕೊಳ್ಳುತ್ತಿದ್ದೇವೆಯೇ ಹೊರತು ತಳಮಟ್ಟಕ್ಕೆ ಇಳಿದೇ ಇಲ್ಲ. ಇನ್ನೂ ಒಂದು ವಿಪರ್ಯಾಸವೆಂದರೆ, ಹಲವಾರು ವಿಷಯಗಳಿಗೆ ಆಧಾರ ಕಾರ್ಡ್, ಪ್ಯಾನ್ ನಂಬರ್ ಅಂತೆಲ್ಲಾ ಸರಕಾರ ದಾಖಲೆಗಳನ್ನಿಟ್ಟುಕೊಂಡರೂ, ಇಷ್ಟೆಲ್ಲಾ ತಂತ್ರಜ್ಞಾನ ಕ್ಷೇತ್ರದಲ್ಲಿ ಅಭಿವೃದ್ಧಿಯಾದರೂ, 2015 ರ ನಂತರ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಅಂತರ್ಜಾಲದಲ್ಲಿ ಯಾವುದೇ ಮಾಹಿತಿಯನ್ನು ಪ್ರಕಟಿಸಿಲ್ಲ. ಅಂಕಿ

**ಸುಳ್ಯದ 'ಸ್ನೇಹ' ಶಾಲೆಯಲ್ಲಿ ನಡೆಯುತ್ತಿರುವ ಪ್ರಯೋಗದಲ್ಲಿ ವಿದ್ಯಾರ್ಥಿಗಳು ಹ್ಯಾಪಿನೆಸ್ ಕ್ಲಬ್ ನಲ್ಲಿ ಜೊತೆಗೂಡಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ.**

ಅಂಶಗಳೇ ಇಲ್ಲದ ಮೇಲೆ ಈ ಕುರಿತು ಸರಿಯಾದ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳುವುದೆಂತು?

ಮೂರನೇ ಹಾಗೂ ನಾಲ್ಕನೇ ಹಂತಗಳು ಬರುವುದೇ ಮೊದಲೆರಡು ಹಂತಗಳು ಅನುಷ್ಠಾನಗೊಂಡಾಗ. ಹಾಗಾಗಿ ಅದರ ಕುರಿತು ಚರ್ಚಿಸುವ ಅಗತ್ಯ ಈಗ ಇಲ್ಲ ಎಂದು ತೋರುತ್ತದೆ.

**ನಗರಗಳಲ್ಲಿ ಹೆಚ್ಚು :** ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿ ಆತ್ಮಹತ್ಯೆಯ ಕುರಿತು 2005ರಲ್ಲೇ ಬಹಳ ಸುದೀರ್ಘವಾದ ಅಧ್ಯಯನ ಮಾಡಿ, ತಡೆಗಟ್ಟಲು ಬೇಕಾದ ಕ್ರಮಗಳ ಒಂದು ವರದಿಯನ್ನು ಸಿದ್ಧಮಾಡಿ ಅದನ್ನು ಅನುಷ್ಠಾನಗೊಳಿಸಿದ್ದಾರೆ. ದೇಶದ 53 ಮೆಗಾ ಸಿಟಿಗಳಲ್ಲಿ ನಡೆಯುವ ಆತ್ಮಹತ್ಯೆಗಳ ಸುಮಾರು 34 ಶೇಕಡಾದಷ್ಟು ದೆಹಲಿ, ಬೆಂಗಳೂರು, ಚೆನ್ನೈ ಹಾಗೂ ಮುಂಬೈಯಲ್ಲಿ ನಡೆಯುತ್ತಿರುವಾಗ ಕನಿಷ್ಠ ಮಹಾನಗರಗಳಲ್ಲಿ ಅಧ್ಯಯನ ಮಾಡಿ ಅಲ್ಲಿನ ಆತ್ಮಹತ್ಯೆಗಳನ್ನು ನಿಯಂತ್ರಿಸುವ ಕಡೆಗೆ ನಾವು ಗಮನ ಹರಿಸಬೇಕು. ಭಾರತದಲ್ಲಿ ಆತ್ಮಹತ್ಯೆಯ ನಿಯಂತ್ರಣಕ್ಕೆ ಹಲವಾರು ಸರಕಾರೇತರ ಸಂಸ್ಥೆಗಳು ಹಾಗೂ ಹೆಲ್ಪ್‌ಲೈನ್ ನಂಬರುಗಳನ್ನು ಒದಗಿಸಲಾಗಿದೆ.

ಆದರೆ ನನ್ನದೇ ಒಂದು ಅಧ್ಯಯನದ ಪ್ರಕಾರ, ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವ ಅನೇಕರು ದೂರವಾಣಿಯಲ್ಲಿ ಮಾತನಾಡುವುದರ ಕುರಿತು ಅಥವಾ ತನ್ಮೂಲಕ ಮಾನಸಿಕ ನೆಮ್ಮದಿ ಸಿಗುವ ಕುರಿತು ಧನಾತ್ಮಕವಾಗಿ ಉತ್ತರಿಸಿಲ್ಲ. ಅಂದರೆ, ಹೆಲ್ಪ್‌ಲೈನ್‌ಗಳಷ್ಟೇ ಅಲ್ಲದೆ, ಇನ್ನೂ ಬೇರೆ ವಿಧಾನಗಳನ್ನು ಕಂಡುಕೊಳ್ಳುವ ಅಗತ್ಯ ಇದೆ.

ಹ್ಯಾಪಿನೆಸ್ ಕ್ಲಬ್: 1980ರ ದಶಕದಿಂದಲೇ ನಾವು ಮಾನಸಿಕ ಆರೋಗ್ಯ ಸಮಾಜ ಮುಖೇನ ನಡೆಯಬೇಕು, ಕೇವಲ ಆಸ್ಪತ್ರೆಗಳಲ್ಲಿ ಅಲ್ಲ ಎಂಬುವುದನ್ನು ನಮ್ಮ ಸರಕಾರಿ ನೀತಿಗಳಲ್ಲಿ ಹೇಳಿಕೊಂಡು ಬಂದಿದ್ದೇವೆ. ಆದರೆ ಇನ್ನೂ ಕೂಡಾ ನಮಗೆ ಮಾನಸಿಕ ಆರೋಗ್ಯದ ಕುರಿತು ಇರುವ ಕಳಂಕವನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಹಾಗಾಗಿ ವಿದ್ಯಾವಂತರೂ ಕೂಡಾ ಮಾನಸಿಕ ಅಸ್ವಸ್ಥತೆಯ ಬಗ್ಗೆ ಮುಚ್ಚಿಡುತ್ತಾರೆ. ಇತರರಲ್ಲಿ ಹೇಳಿಕೊಳ್ಳುವುದಿಲ್ಲ. ಮಾನಸಿಕ ತಜ್ಞರನ್ನು ಕೇವಲ ಹುಚ್ಚರು ಮಾತ್ರ ಭೇಟಿ ಮಾಡುವುದು ಎಂಬ ತಪ್ಪು ಕಲ್ಪನೆ ಇದೆ. ಇದನ್ನು ಹೋಗಲಾಡಿಸುವುದು ಅಷ್ಟೊಂದು ಸುಲಭದ ಮಾತಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಇರಬಹುದು, ರ‍್ಯಾಲಿಗಳಿರಬಹುದು ಮುಂತಾದುವುಗಳಿಂದಷ್ಟೇ ಮಾನಸಿಕ ಆರೋಗ್ಯದ ಕುರಿತು ಎಚ್ಚರ ಮೂಡಿಸುವುದು ಕಷ್ಟ. ಅದಕ್ಕೆ ನಾನು ಬಳಸಿಕೊಂಡಿರುವ ಮಾಧ್ಯಮವೇ 'ಸ್ವಸಹಾಯ ಸಂಘ'ಗಳ ಮಾದರಿ.

ಇದು ಸುಳ್ಯದ 'ಸ್ನೇಹ' ಶಾಲೆಯಲ್ಲಿ ನಡೆಯುತ್ತಿರುವ ಪ್ರಯೋಗ. ಹತ್ತನೆಯ ತರಗತಿಯ ವಿದ್ಯಾರ್ಥಿಗಳು ವಾರಕ್ಕೆ ಎರಡು ಬಾರಿ ಹ್ಯಾಪಿನೆಸ್ ಕ್ಲಬ್ ನಲ್ಲಿ ಜೊತೆಗೂಡಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ತಮ್ಮಲ್ಲಾಗುತ್ತಿರುವ ಮಾನಸಿಕ ತುಮುಲಗಳನ್ನು ಯಾವುದೇ ಸಂಕೋಚ ಇಲ್ಲದೆ ಇತರರಿಗೆ ತಿಳಿಸುತ್ತಾರೆ. ಆವಾಗ ಇತರರು ಅವರ ಭಾವನೆಗಳಿಗೆ ಸ್ಪಂದಿಸುತ್ತಾರೆ. ಈ ಮೂಲಕ ವಿದ್ಯಾರ್ಥಿಗಳಿಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಒಂದು ಮಾಧ್ಯಮ ಸಿಕ್ಕಿರುವುದಷ್ಟೆ ಅಲ್ಲ, ಬದಲಾಗಿ ತಮ್ಮ ದೌರ್ಬಲ್ಯಗಳನ್ನು ಇತರರ ಮುಂದೆ ಒಪ್ಪಿಕೊಂಡು ಅದನ್ನು ಜಯಿಸಲು ದಾರಿಯನ್ನು ಕಂಡುಕೊಳ್ಳುವುದಕ್ಕೂ ಅವಕಾಶವಾಗಿದೆ.

ತನ್ಮೂಲಕ ಬೇರೆ ಬೇರೆ ಸಂದರ್ಭಗಳಲ್ಲಿ ಆಗುವ ಸಂತೋಷ ಹಾಗೂ ಧನಾತ್ಮಕ ಭಾವನೆಗಳ ಜೊತೆಗೆ, ಉದ್ವೇಗಗಳು, ಅಸಹಾಯಕ ಪರಿಸ್ಥಿತಿ, ದುಃಖ ದುಮ್ಮಾನಗಳು ಹೀಗೆ ಅನೇಕ ರೀತಿಯ ಭಾವನೆಗಳ ಸ್ಫುರಣೆಗೆ ಮತ್ತು ಅವುಗಳ ಪ್ರಕಟಣೆಗೆ ಒಂದು ಅವಕಾಶ ಸಿಕ್ಕಿದಂತಾಗಿದೆ.

ಇದೇ ಮಾದರಿಯನ್ನು ನಾವು ಬೇರೆ ಬೇರೆ ಪ್ರಕಾರಗಳಲ್ಲಿ, ಬೇರೆ ಸ್ಥಳಗಳಲ್ಲಿ, ಬೇರೆ ಬೇರೆ ವ್ಯಕ್ತಿಗಳು ಒಂದುಗೂಡಿ ಮಾಡಬಹುದು ಮತ್ತು ಹಾಗೆ ಮಾಡುವುದರಿಂದ ವ್ಯಕ್ತಿಗಳಿಗೆ ತಮ್ಮ ಜೊತೆಗೆ ಒಂದಷ್ಟು ಜನ ಇದ್ದಾರೆ ಎಂಬ ಧೈರ್ಯ ಬರುತ್ತದೆ.

19 ನೇ ಶತಮಾನದಲ್ಲೇ ಎಮಿಲಿ ಡರ್ಖೆಮ್ (Emile Durkheim) ಎನ್ನುವ ಸಮಾಜಶಾಸ್ತ್ರಜ್ಞ ಆತ್ಮಹತ್ಯೆಯ ಕುರಿತು ಅಧ್ಯಯನ ನಡೆಸಿ, ಆತ್ಮಹತ್ಯೆ ಎನ್ನುವುದು ಕೇವಲ ಒಂದು ವೈಯಕ್ತಿಕ ಕ್ರಿಯೆಯಲ್ಲ, ಬದಲಾಗಿ ಸಾಮಾಜಿಕ ಕ್ರಿಯೆ ಎಂದು ಹೇಳಿದ್ದರು. ಬಹುಶಃ ಭಾರತದಲ್ಲೂ ಹೆಚ್ಚುತ್ತಿರುವ ಆತ್ಮಹತ್ಯೆಯ ಸಂಖ್ಯೆಗಳಿಗೆ ಬದಲಾಗುತ್ತಿರುವ ನಮ್ಮ ಸಾಮಾಜಿಕ ರಚನೆ, ಕುಟುಂಬ ಪದ್ಧತಿ ಹಾಗೂ ಸ್ತರವಿನ್ಯಾಸಗಳೂ ಕಾರಣಗಳಿರಬಹುದು. ಇದರ ಕುರಿತು ಸರಿಯಾಗಿ ಅಧ್ಯಯನ ಮಾಡಿ ಕಾರಣಗಳನ್ನು ಗೊತ್ತುಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೌಟುಂಬಿಕ ಮಟ್ಟದಿಂದ, ಜಾಗತಿಕ ಮಟ್ಟದವರೆಗೂ ಕೈಜೋಡಿಸಬೇಕು. ಯಾಕೆಂದರೆ ಪ್ರತಿಯೊಂದು ಜೀವವೂ ಅಮೂಲ್ಯವಲ್ಲವೇ? ಕಳೆದುಕೊಂಡವರ ದುಃಖ ನಮ್ಮದಾಗದಿರಲಿ.

**ಮನಃಶಾಸ್ತ್ರಜ್ಞ ಹಾಗೂ ಅಂತಾರಾಷ್ಟ್ರೀಯ ಮಟ್ಟದ TEDx ಭಾಷಣಕಾರರಾಗಿರುವ ಅಕ್ಷರ ದಾಮ್ಲೆ ಮಾನಸಿಕ ಆರೋಗ್ಯವನ್ನು ಕಾಪಾಡುವುದಕ್ಕಾಗಿ 'ಮನೋ ಸಂವಾದ' ಎಂಬ ಸಂಸ್ಥೆಯ ಮೂಲಕ ಮನೋಚಿಕಿತ್ಸೆ ಮತ್ತು ಇತರ ಸಂಘಸಂಸ್ಥೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಬ್ಯಾಂಕಿಂಗ್, ಪೊಲೀಸ್, ಶಿಕ್ಷಕರು, ಕಾರ್ಪೊರೇಟ್ ಉದ್ಯೋಗಿಗಳು ಸೇರಿದಂತೆ ಹಲವಾರು ಸಂಸ್ಥೆಗಳಲ್ಲಿ ಒತ್ತಡ ನಿರ್ವಹಣೆ, ಕಲಹಗಳ ನಿರ್ವಹಣೆ, ನಾಯಕತ್ವ ಮುಂತಾದ ಹಲವಾರು ಕಾರ್ಯಾಗಾರಗಳನ್ನು ನಡೆಸಿದ್ದಾರೆ. ಸಂಪರ್ಕ: ಮನೋಸಂವಾದ**
(www.manosamvaada.com)
aksharadamlemanosamvaada.com

ಅನಿಸಿಕೆ
ರಾಂ ಎಲ್ಲಂಗಳ
vveditoped@gmail.com



# 'ಇನ್ನಿನಿಸು ನೀ ಬದುಕಬೇಕಿತ್ತು' ಕವಿನುಡಿ ನೆನಪಾಗುವುದೇಕೆ?

ಎಂದಿನಂತೆ ಅಕ್ಟೋಬರ್ 2 ಬಂದು ಹೋಯಿತು. ಅಂದುಕೊಂಡಂತೆ ಗಾಂಧೀ ಜಯಂತಿ ಆಚರಣೆಯೂ ಮುಗಿದು ಹೋಯಿತು. ನಾಡು ಮತ್ತೆ ಯಥಾಸ್ಥಿತಿಗೆ ಮರಳಿದೆ. ಬದುಕಿನುದ್ದಕ್ಕೂ ಸತ್ಯ-ಅಹಿಂಸೆಗಳ ತತ್ವಾದರ್ಶಗಳನ್ನು ಮುಂದಿಟ್ಟುಕೊಂಡು ಮುನ್ನಡೆದ ಮಹಾತ್ಮ ಅವರು. ಅಸ್ಪೃಶ್ಯತೆ, ಜಾತೀಯತೆ ವಿರುದ್ಧ ಅವಿರತ ಹೋರಾಡಿದರು ಬಾಪೂ. ಆದರೆ ಅವಿನ್ನೂ ಜೀವಂತ. ಮೊನ್ನೆ ಮೊನ್ನೆ ಸಂಸದ ನಳಿನ್‌ಕುಮಾರ್ ಕಟೀಲ್ ಬಿಜೆಪಿ ರಾಜ್ಯಾಧ್ಯಕ್ಷರಾದಾಗ ಹಿರಿಯ ಮುಸ್ಲಿಂ ನಾಯಕರು ಅವರನ್ನು ಅಭಿನಂದಿಸಿದರು. ಕೈ ಪಾಳಯಕ್ಕದು ಅಪಥ್ಯ ಅನಿಸಿತು. ಅಭಿನಂದಿಸುವುದೂ ಅಪರಾಧವೆನಿಸಿಬಿಟ್ಟಿತು. ಅಭಿನಂದಿಸಿದ್ದಕ್ಕೂ ಅಪಸ್ವರವೆತ್ತಿತು! ಇದೂ ಒಂದು ತೆರನಾದ ಅಸ್ಪೃಶ್ಯತೆ. ಪಕ್ಷಗಳ ನಡುವಣ ಅಸ್ಪೃಶ್ಯತೆ.

ಒಂದು ಪಕ್ಷದವರು ಇನ್ನೊಂದು ಪಕ್ಷದವರ ಕೈಕುಲುಕುವುದೂ ಅಪರಾಧ. ವೇದಿಕೆ ಹಂಚಿಕೊಂಡರಂತೂ ಮಹಾಪರಾಧ. ಅದು ಪಕ್ಷವಿರೋಧಿ ಚಟುವಟಿಕೆ.

ಅಸ್ಪೃಶ್ಯತೆಯೆಂಬುದು ಹಿಂದೂ ಧರ್ಮಕ್ಕಂಟಿದ ಲಜ್ಜಾಸ್ಪದ ಕಳಂಕ. ಹಾಗೆಂದು ಅದನ್ನು ನಿರ್ಮೂಲನಗೊಳಿಸುವುದು ಬಸವಣ್ಣನವರ ಆಶಯವೂ ಆಗಿತ್ತು. ಅಂಬೇಡ್ಕರ್ ಅಸ್ಪೃಶ್ಯತೆಯ ಕಹಿಯುಂಡವರು. ಅವರು ಅದನ್ನೊಂದು ಸಾಮಾಜಿಕ ಪಿಡುಗೆಂದು ತಿಳಿದು ತೊಡೆದು ಹಾಕಲು ಪಣತೊಟ್ಟರು. ಆದರೇನು ಮಾಡೋಣ? ಅದಿಂದು ರಾಜಕೀಯ ಸ್ವರೂಪ ತಳೆದುಬಿಟ್ಟಿದೆ.

ಸದ್ಯದಲ್ಲೇ ವಿಧಾನಮಂಡಲದ ಚಳಿಗಾಲದ ಅಧಿವೇಶನ ನಡೆಯಲಿದೆ. ಸಂಸತ್ ಅಧಿವೇಶನವೂ ನಡೆಯಲಿದೆ. ಅಧಿವೇಶನವೆಂದ ಮೇಲೆ ಸರಕಾರ ಒಂದಿಷ್ಟು ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಅಧಿವೇಶನದಲ್ಲಿ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚೆ ನಡೆಸಬೇಕಾಗುತ್ತದೆ. ಆದರೆ ಆಡಳಿತ ಪಕ್ಷಕ್ಕಿಂತಲೂ ಪ್ರತಿಪಕ್ಷಗಳು ಸಿದ್ಧತೆ ಮಾಡಿಕೊಳ್ಳುವುದೇ ಹೆಚ್ಚು. ಅದು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಲುವಾಗಿ! ಆಡಳಿತ ಪಕ್ಷಕ್ಕೆ ಕ್ರೆಡಿಟ್ ತರಬಲ್ಲ ಕ್ರಮಗಳನ್ನು ಸಹಿಸದೆ ಅಧಿವೇಶನಕ್ಕೆ ಅಡ್ಡಿಪಡಿಸುವುದೇ ರೂಢಿ. ಪಕ್ಷದೊಳಗಣ ವಿವಿಧ ಬಣಗಳ ನಡುವೆಯೂ ಅಸ್ಪೃಶ್ಯತೆ ಇರುವುದುಂಟು. ಬಣಗಳೊಳಗೆ ವೈಷಮ್ಯ ತಲೆದೋರುವುದುಂಟು. ಪ್ರಸ್ತುತ ರಾಜ್ಯ ಕಾಂಗ್ರೆಸಿನಲ್ಲಿ ಮೂಲ ಹಾಗೂ ವಲಸಿಗರ ನಡುವೆ ತಿಕ್ಕಾಟ ನಡೆದಿದೆ. ಪರಮೇಶ್ವರ-ಸಿದ್ದರಾಮಯ್ಯ ಬಣಗಳ ನಡುವಣ ತಾಕಲಾಟ ತಾರಕಕ್ಕೇರುವುದರಲ್ಲಿದೆ. ಅಷ್ಟೇಕೆ? ರಾಜ್ಯ ಬಿಜೆಪಿಯಲ್ಲೂ ಯಡಿಯೂರಪ್ಪ ಬಣ-ನಳಿನ್ ಕುಮಾರ್ ಬಣಗಳ ನಡುವಣ ಮುಸುಕಿನೊಳಗಣ ಗುದ್ದಾಟ ಯುವ ಮೋರ್ಚಾ ಮತ್ತು ಹಿಂದುಳಿದ ವರ್ಗಗಳ ಮೋರ್ಚಾಗಳೊಳಗೆ ಸಮರಕ್ಕೆಡೆಮಾಡಿದೆ.

ಹಬ್ಬ-ಉತ್ಸವಾದಿಗಳ ಸಂದರ್ಭದಲ್ಲಿ ಜನಪ್ರತಿನಿಧಿಗಳು ಶಾಂತಿ-ಸಾಮರಸ್ಯ ಕಾಯ್ದುಕೊಳ್ಳುವಂತೆ ಜನತೆಗೆ ಕರೆ ನೀಡುವುದಿದೆ. ವೇದಿಕೆ ಏರಿ ಏಕತೆ-ಸಮಾನತೆಗಳ ಬಗ್ಗೆ ಮಾತನಾಡುವುದಿದೆ. ಆದರೆ ಅವರೇ ಅದನ್ನು ಪಾಲಿಸರು. ಎಲ್ಲವೂ ಈಗೀಗ ವೇದಿಕೆಗಷ್ಟೇ ಸೀಮಿತವಾಗಿಬಿಟ್ಟಂತಿದೆ.

ಇನ್ನು ಜಾತಿ ಮನೋಭಾವವೂ ಹೊಸ ರೂಪದಲ್ಲಿ ಕಾಣಿಸಿಕೊಂಡಿದೆ. ರಾಜಕಾರಣಿಗಳ ಮತಗಳಿಕೆಗೆ ಅಸ್ತ್ರವಾಗಿ ಬಳಕೆಯಾಗುತ್ತಿದೆ. ಚುನಾವಣೆ ಸಮೀಪಿಸುತ್ತಲೇ ರಾಜಕೀಯ ಪಕ್ಷಗಳು ಜಾತಿ ಲೆಕ್ಕಾಚಾರ ಮಾಡುವುದೇನೂ ಗುಟ್ಟಾಗಿ ಉಳಿದಿಲ್ಲ. ಅಭ್ಯರ್ಥಿಗಳನ್ನು ಕಣಕ್ಕಿಳಿಸುವಲ್ಲಾಗಲೀ ಸಚಿವ ಸ್ಥಾನ ನೀಡುವಲ್ಲಾಗಲೀ ಜಾತಿವಾರು ಆದ್ಯತೆ ಹೊಸದಲ್ಲ. ಜಾತ್ಯತೀತ ರಾಷ್ಟ್ರವೆಂಬ ಹಣೆಪಟ್ಟಿ ಕಟ್ಟಿಕೊಂಡಿದ್ದರೂ, ಬಸವಣ್ಣನವರಂತಹ ದಾರ್ಶನಿಕರು ಅದರ 'ಬೇರಿಗೆ ಬೆನ್ನೀರು ಹೊಯ್ಯಬೇಕೆ'ಂದಿದ್ದ ಜಾತೀಯತೆಯ ಪಿಡುಗು ರಾಜಕಾರಣಿಗಳ ಕೈಲಿನ್ನೂ ಜೀವಂತ!

ಸತ್ಯ-ಅಹಿಂಸೆಗಳ ವಿಚಾರದಲ್ಲೂ ಅಷ್ಟೆ. ಗಾಂಧೀಜಿಯವರೇನೋ ಅವುಗಳನ್ನು ವ್ರತೋಪಾದಿ ಪಾಲಿಸಿಕೊಂಡು ಬಂದರು. ಆದರೆ ವರ್ಷಕ್ಕೊಂದು ದಿನ ಗಾಂಧೀ ಸಮಾಧಿ ಮೇಲೆ ತಪ್ಪದೆ ಹೂವಿಡುವ ನಮ್ಮ ಜನಪ್ರತಿನಿಧಿಗಳು ಸತ್ಯಕ್ಕೆ ಸಮಾಧಿ ಕಟ್ಟಿಬಿಟ್ಟಿದ್ದಾರೆ. ಹಾಗಲ್ಲದೆ ಒಬ್ಬರ ಹಿಂದೆ ಒಬ್ಬರು ಜೈಲು ಸೇರುವ ಪ್ರಮೇಯ ಬರುತ್ತಿತ್ತೆ? ದೇಶ ಭಯೋತ್ಪಾದನೆಯ ಕಪಿಮುಷ್ಟಿಯೊಳಗೆ ಸಿಲುಕಿ ನಲುಗುತ್ತಿದೆ. ಹಾಡಹಗಲೇ ಹತ್ಯೆ ನಡೆದು ಅಮಾಯಕರ ಜೀವ ಬಲಿಯಾಗುತ್ತಿದೆ. ಆದರೆ ಸಾವಿನ ವಿಚಾರದಲ್ಲೂ ರಾಜಕೀಯ ನಡೆಯುತ್ತಿರುವುದೊಂದು ದುರಂತ. ರಾಷ್ಟ್ರದ ಏಕತೆ ಹಾಗೂ ಭದ್ರತೆ ವಿಚಾರದಲ್ಲೂ ಪಕ್ಷಭೇದ ತೋರುವುದು ರಾಜಕೀಯ ಅಸ್ಪೃಶ್ಯತೆಯ ಪರಮಾವಧಿಯಲ್ಲವೆ? ವಿರೋಧಕ್ಕಾಗಿ ವಿರೋಧ ರಾಷ್ಟ್ರಹಿತಕ್ಕೆ ಬಲು ಆತಂಕಕಾರಿ.

## ಭಟ್ಟರ್ ಸ್ಕಾಚ್

- **ಸವಿತಾ ದೇವರಾಜ್, ಕದಿರೇನಹಳ್ಳಿ**
ಕನ್ನಡದಲ್ಲಿ ಉತ್ತಮ ನಟರ ಅಭಾವವಿದೆ ಅಂತ ಅನಿಸುತ್ತಾ ಭಟ್ರೇ?
**- ನೀವು ಆ ಶ್ರೀನಗರ ಕಿಟ್ಟಿಯನ್ನು ನೋಡಿ ಈ ಅಭಿಪ್ರಾಯಕ್ಕೆ ಬರಬಾರದಿತ್ತು!**

- **ಪಾಪಯ್ಯ ಶ್ರೀಕಾಂತ, ಸಂಜಯನಗರ**
ದೇವೇಗೌಡರಿಗೆ ಸರ್ದಾರ್ ಪಟೇಲರ ಪ್ರತಿಮೆ ನೋಡಿ ಏನನಿಸಿರಬಹುದು?
**- ಹೆಗಡೆ, ಗೌಡರನ್ನು ಬಿಟ್ಟು ಕೇವಲ ಪಟೇಲರ ಪ್ರತಿಮೆ ಮಾಡಿದ್ದು ಎಷ್ಟು ಸರಿ ಎಂದು ಅನಿಸಿತಂತೆ!**

- **ರಾಜಾರಾಮ ಬಾರಕೂರು, ಉಡುಪಿ**
ಪ್ರೀತಿಗೇಕೆ ಯಾರೂ ಕಿಮ್ಮತ್ತು ಕೊಡುವುದಿಲ್ಲ?
**- ಅದಕ್ಕೆ ಜಿಎಸ್ಟಿ ಕೊಡಬೇಕಿಲ್ಲವಲ್ಲ!**

- **ಸುರೇಶ ಕಮ್ಮಾರ, ಬಾಗಲಕೋಟೆ**
ಸೋನಿಯಾ ಗಾಂಧಿ ಅವರದು ಹಿತ್ತಾಳೆ ಕಿವಿಯಂತೆ, ನಿಜವಾ?
**- ಅದಕ್ಕಾಗಿ ಡಾ.ಪರಮೇಶ್ವರ ಪ್ರತಿ ಸಲ ದಿಲ್ಲಿಗೆ ಹೋದಾಗ ಊದಿ ಊದಿ ಬರುತ್ತಾರೆ!**

- **ರಾಜೇಶ್ವರಿ ಹೆಗಡೆ, ಶಿರಸಿ**
ಭಟ್ರೇ, ಕಾಂಗ್ರೆಸ್ ಪಕ್ಷವನ್ನು ಮೇಲೆತ್ತುವುದು ಹೇಗೆ, ಸಲಹೆ ಕೊಡ್ತೀರಾ?
**- ಅದೊಂಥರಾ ಆತ್ಮಲಿಂಗದಂತೆ ಬೇರುಬಿಟ್ಟಿದೆ, ಗೋರಿ ಕಟ್ಟೋದೇ ವಾಸಿ ಅಂದ್ರಂತೆ ಅನರ್ಹ ಶಾಸಕರು!**

- **ಶಿವರಾಮ ಪಾಟೀಲ, ಹುಕ್ಕೇರಿ**
ನೀವು ಮೊಯಿಲಿ ಮಹಾಕಾವ್ಯ ಓದಿಯೇ ಸಾಹಿತ್ಯ ಅಭಿರುಚಿ ಬೆಳೆಸಿಕೊಂಡಿರಂತೆ, ಹೌದಾ?
**- ಸಾಹಿತ್ಯಕ್ಕೂ, ಅಭಿರುಚಿಗೂ, ಮೊಯಿಲಿ ಮಹಾಕಾವ್ಯಕ್ಕೂ ಎಲ್ಲಿಯ ಸಂಬಂಧ ಗುರು?!**

- **ಜಿ.ಕೆ.ಗೋವಿಂದ, ತ್ಯಾಗರಾಜನಗರ**
ಸಂಸದ ತೇಜಸ್ವಿ ಸೂರ್ಯ ಮಹಾನ್ ಕನ್ನಡಪ್ರೇಮಿಯಂತೆ ಹೌದಾ?
**- ಇಂಗ್ಲಿಷ್ ಗೋಡೆಬರಹಗಳ ಮೇಲೆ ಉಚ್ಚೆ ಹಾರಿಸಿದ ನಾಯಿಗಳನ್ನೆಲ್ಲಾ ನಾನೇ ಸಾಕಿದ್ದು ಅಂತಾನಂತೆ!**

- **ಪರಮಶಿವಯ್ಯ ಕೆ., ಸದಾಶಿವನಗರ**
ಯಡಿಯೂರಪ್ಪ ಮತ್ತಷ್ಟು ಸೀರಿಯಸ್ ಆಗಿಬಿಟ್ಟಿದ್ದಾರಲ್ಲ, ಜೀ?
**- ಅವರ 'ಸಂತೋಷ'ವನ್ನು ಯಾರೋ ಕಿತ್ತುಕೊಂಡಿದ್ದಾರಂತೆ 'ಜೀ'!**

- **ನೂತನ ಶೆಟ್ಟಿ, ಮೈಸೂರು**
ಜೆಡಿಎಸ್ ಮತ್ತಷ್ಟು ಹೊಳೆಯುವಂತಾಗಲು ಏನು ಮಾಡಬೇಕು?
**- ಸಾಯಿಗೋಲ್ಡ್ ಶರವಣನನ್ನು ಮತ್ತಷ್ಟು ಹತ್ತಿರ ಇಟ್ಟುಕೊಳ್ಳಬೇಕು!**

- **ನಾಗೇಶ ಬಾರಿಸಿಡ್ಲು, ಚನ್ನಪಟ್ಟಣ**
ಕನ್ನಡ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಯಾಕೆ ಸುಮ್ಮನಿದ್ದಾರೆ?
**- ಅದೇ ತಾವು ಕನ್ನಡ ಸಾಹಿತ್ಯಕ್ಕೆ ಕೊಡಬಹುದಾದ ಉತ್ತಮ ಕೊಡುಗೆ ಎಂಬುದು ಅವರಿಗೆ ತಡವಾಗಿ ಅನಿಸಿದೆಯಂತೆ!**

# ನೀವು ಮಾತ್ರ ಇದನ್ನು ಮಾಡಬಲ್ಲಿರಿ ಸುರೇಶ್‌ಕುಮಾರ್ !

**ಶಿಕ್ಷಣ ಇಲಾಖೆ ಶೀಘ್ರದಲ್ಲೇ ಭ್ರಷ್ಟಾಚಾರದಲ್ಲಿ ಪ್ರಥಮ ಸ್ಥಾನವನ್ನು ಪಡೆಯಬಹುದು ಎಂಬಂತಿದೆ. ಕೇಸ್ ವರ್ಕರ್‌ಗಳಿಂದ ಹಿಡಿದು ಉನ್ನತಾಧಿಕಾರಿಗಳವರೆಗೂ 'ಕೆಂಪುಪಟ್ಟಿ ಮಾನಸಿಕತೆ!'**

ಪ್ರದೀಪ್ ಭಾರದ್ವಾಜ್
vveditoped@gmail.com



ಮಾನ್ಯ ಶಿಕ್ಷಣ ಮಂತ್ರಿಗಳಾದ ನಿಮ್ಮ ಬಗ್ಗೆ ಕಳೆದ ವಾರ ಇದೇ ಪತ್ರಿಕೆಯಲ್ಲಿ ತುರುವೇಕೆರೆ ಪ್ರಸಾದ್ ಲೇಖನವೊಂದನ್ನು ಪ್ರಕಟಿಸಿದ್ದರು. ತಮ್ಮ ಸಂವೇದನಾಶೀಲತೆ, ನೈತಿಕತೆ, ಪ್ರಾಮಾಣಿಕತೆ ಮತ್ತು ಕಾರ್ಯತತ್ಪರತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಲೇಖನ ನೋಡಿ ಸಂತೋಷವಾಯಿತು. ಇತ್ತೀಚಿನ ದಿನಗಳಲ್ಲಿ ಮಂತ್ರಿಗಳ ಬಗ್ಗೆ ಇಷ್ಟು ಒಳ್ಳೆಯ ಮಾತುಗಳನ್ನು ಕೇಳಿದಾಗ ಸಂತೋಷವಾಗದಿರಲು ಕಾರಣವೇ ಇಲ್ಲ ಮತ್ತು ತಾವು ಇಂತಹ ಒಳ್ಳೆಯ ಲೇಖನದ ವಸ್ತುವಾದದ್ದು ಇನ್ನೂ ಸಂತೋಷ.

ಒಂದಿಷ್ಟು ಸಂಗತಿಗಳನ್ನು ನಿಮ್ಮ ಗಮನಕ್ಕೆ ತರಲೇಬೇಕೆಂದು ಈ ಪತ್ರ. ಇದರಲ್ಲಿರುವ ಸಂಗತಿಗಳು ನಿಮಗೆ ಗೊತ್ತಿಲ್ಲವೆಂದೇನಲ್ಲ, ಆದರೆ ನಿಮ್ಮ ಅವಗಾಹನೆಗೆ ಮತ್ತೊಮ್ಮೆ ತರುತ್ತಿದ್ದೇನೆ ಅಷ್ಟೆ. ಕಳೆದ ಕಾಂಗ್ರೆಸ್ ಸರಕಾರದಲ್ಲಿ ಶಿಕ್ಷಣ ಸಚಿವರಾಗಿದ್ದ ಕಿಮ್ಮನೆ ರತ್ನಾಕರರು ಶಿಕ್ಷಣ ವ್ಯವಸ್ಥೆಯನ್ನು ಬದಲಾಯಿಸುವ ಬದಲು ಶಿಕ್ಷಕ ಮಿತ್ರರಿಗೆ ಬುದ್ಧಿವಾದ ಹೇಳುತ್ತಾ, ಸಹಾಯ ಕೋರಿ ಬಂದವರಿಗೆ ಗಾಂಧೀಜಿ, ಪಟೇಲ್, ಮುಂತಾದವರ ಬಗ್ಗೆ ಪ್ರಶ್ನೆಗಳನ್ನು ಕೇಳಿ ಮುಖಭಂಗ ಮಾಡಿ ಕಳುಹಿಸಿದ್ದೇ ಹೆಚ್ಚು. ಹೆಸರಿಗೆ ಪಠ್ಯಪುಸ್ತಕ ವಿಮರ್ಶಾ ಸಮಿತಿಯೊಂದನ್ನು ರಚಿಸಿ ಬರಗೂರು ರಾಮಚಂದ್ರಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿ ಭಾಷೆ ಮತ್ತು ಸಮಾಜವಿಜ್ಞಾನದ ಪಠ್ಯಗಳನ್ನು ಕುಲಗೆಡಿಸುವಲ್ಲಿ ಯಶಸ್ವಿಯಾದರು. ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಸಿಬಿಎಸ್‌ಇ ಪಠ್ಯಪುಸ್ತಕವನ್ನೇ ನೇರವಾಗಿ ಕನ್ನಡಕ್ಕೆ ಅನುವಾದಿಸಿ ಕೃತಾರ್ಥರಾದರು.

ಆನಂತರ ಇಲಾಖೆಯ ಅಧಿಕಾರ ವಹಿಸಿಕೊಂಡ ತನ್ವೀರ್‌ಸೇಠ್‌ರದ್ದು ಸಾರ್ವಜನಿಕ ಸಮಾರಂಭದಲ್ಲಿ ಮೊಬೈಲ್‌ನಲ್ಲಿ ಅಶ್ಲೀಲಚಿತ್ರವನ್ನು ನೋಡಿದ್ದೇ 'ಶೈಕ್ಷಣಿಕ' ಸಾಧನೆ. ಇನ್ನು ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಶಿಕ್ಷಣ ಮಂತ್ರಿಗಳೇ ಇರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿಗಳು ತಮಗಿದ್ದ ಅತಿಯಾದ ಕಾರ್ಯ ಒತ್ತಡದಲ್ಲಿ (?!) ಶಿಕ್ಷಣಕ್ಕೆ ಸಮಯ ಕೊಡುವುದು ದೂರದ ಸಾಧ್ಯತೆ ಯಾಗಿತ್ತು.

ನೂತನ ಬಿಜೆಪಿ ಸರಕಾರದ ಶಿಕ್ಷಣ ಮಂತ್ರಿಯಾಗಿ ನೇಮಕಗೊಂಡ ತಾವು ಶಿಕ್ಷಣ ಇಲಾಖೆಯಲ್ಲಿರುವ ಎಲ್ಲರೂ ನನ್ನ ಕುಟುಂಬದಂತೆ ಎಂದಿರಿ, ಬಹಳ ಸಂತೋಷ. ಆದರೆ ಕುಟುಂಬದಲ್ಲಿ ತಪ್ಪು ಮಾಡಿದವರನ್ನು ಕ್ಷಮಿಸಬೇಕೆಂದೇನಿಲ್ಲ. ರಾಜ್ಯದಲ್ಲಿ ಅತ್ಯಂತ ಭ್ರಷ್ಟ ಇಲಾಖೆ ಯಾವುದೆಂದರೆ ಲೋಕೋಪಯೋಗಿ, ಕಂದಾಯ, ಸಾರಿಗೆ, ಅಬಕಾರಿಗಳ ನಡುವೆ ಪೈಪೋಟಿ ಇದೆ ಎಂದು ಜನ ಆಡಿಕೊಳ್ಳುವುದುಂಟು. ಆದರೆ ಶಿಕ್ಷಣ ಇಲಾಖೆಯನ್ನು ಬಲ್ಲವರಿಗೆ ಈ ಎಲ್ಲಾ ಇಲಾಖೆಗಳನ್ನು ಹಿಂದಿಕ್ಕಿ ಶಿಕ್ಷಣ ಇಲಾಖೆ ಶೀಘ್ರದಲ್ಲೇ ಪ್ರಥಮ ಸ್ಥಾನವನ್ನು ಪಡೆಯಬಹುದು ಎಂಬಂತಿದೆ. ಕೇಸ್ ವರ್ಕರ್‌ಗಳಿಂದ ಹಿಡಿದು ಉನ್ನತಾಧಿಕಾರಿಗಳವರೆಗೂ ಇರುವ 'ಕೆಂಪುಪಟ್ಟಿ ಮಾನಸಿಕತೆ'ಯನ್ನು ಬದಲಾಯಿಸುವಿರೇ? ಯಾವುದೇ ಒಂದು ಕಡತ ಇಲಾಖೆಯ ಒಳಗೆ ಹೋಗಿ ಒಂದೇ ಬಾರಿಗೆ ಆಚೆ ಬಂದುಬಿಟ್ಟರೆ ಅದು ಇಲಾಖೆಗೇ ಅವಮಾನ ಎಂಬುವಂತಾಗಿದೆಯಲ್ಲಾ ಸಾರ್?!

ಗ್ರಾಮೀಣ ಶಾಲೆಗಳಲ್ಲಿ ರಾತ್ರಿ ವಾಸ್ತವ್ಯ ಮಾಡಿದಿರಿ, ಮಕ್ಕಳ ಕಲಿಕಾಮಟ್ಟವನ್ನು ಕಣ್ಣಾರೆ ಕಂಡಿರಿ, ವಿದ್ಯಾರ್ಥಿಗಳಿಂದ ಹಾಡು ಹಸೆ ಕೇಳಿ ಸಂತೋಷಪಟ್ಟಿರಿ. ಆದರೆ ಸರಕಾರಿ ಶಾಲೆಗಳಲ್ಲಿ ದಿನದಿಂದ ದಿನಕ್ಕೆ ದಾಖಲೆ ಕುಸಿಯುತ್ತಿರುವುದಕ್ಕೆ ಕಾರಣ ಕಂಡುಹಿಡಿಯಬೇಕಲ್ಲವೇ?

ದೆಹಲಿಯ ಮುಖ್ಯಮಂತ್ರಿಗಳ ಬಗ್ಗೆ ನನಗೇನೂ ಅಂತಹ ಒಳ್ಳೆಯ ಭಾವನೆ ಇಲ್ಲ. ಆದರೆ ಮಾಧ್ಯಮಗಳು ಕೇಜ್ರಿವಾಲರ ಶಿಕ್ಷಣ ಕ್ರಾಂತಿಯ ಬಗ್ಗೆ ಕೊಂಡಾಡಿದ್ದನ್ನು ಕಂಡು ನಾನು ದೆಹಲಿಗೆ ಹೋದಾಗ ಅಲ್ಲಿನ ಸರಕಾರಿ ಶಾಲೆಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿದೆ. ನಿಜವಾಗಿಯೂ ದೆಹಲಿ ಸರಕಾರ ಅದ್ಭುತ ಕೆಲಸ ಮಾಡಿದೆ. ಅಂತಹ ಪರಿವರ್ತನೆ ಕರ್ನಾಟಕದಲ್ಲೂ ಅಗತ್ಯವಿದೆ. ಅಧಿಕಾರಗಳ ಒಂದು ತಂಡವನ್ನು ದೆಹಲಿಗೆ ಕಳುಹಿಸಿ, ಅಲ್ಲಿನ ಶಿಕ್ಷಣ ವ್ಯವಸ್ಥೆ ಬಗ್ಗೆ ಅಧ್ಯಯನ ನಡೆಸುವುದು ಖಂಡಿತ ಪ್ರಯೋಜನಕಾರಿ ಸರ್.

ಪಿಯು ಮಂಡಳಿ ಕಳುಹಿಸುವ ಯಾವುದೇ ಸುತ್ತೋಲೆಗಳಿಗೆ ನಯಾಪೈಸೆಯ ಕಿಮ್ಮತ್ತು ಇಲ್ಲ. ರಾಜ್ಯದಲ್ಲಿರುವ ಆಂಧ್ರ ಮೂಲದ ಶಿಕ್ಷಣ ಸಂಸ್ಥೆಗಳಲ್ಲಿ ಕರ್ನಾಟಕದ ಪಠ್ಯಕ್ಕೆ ಬೆಲೆಯೇ ಇಲ್ಲ. ತಮ್ಮದೇ ಸಮಾನಂತರ ಪಠ್ಯಕ್ರಮವನ್ನು ರೂಪಿಸಿ ಪಿಯು ಮಂಡಳಿಯನ್ನೇ ದಾರಿ ತಪ್ಪಿಸಿದ್ದಾರೆ. ಶುಲ್ಕವಂತೂ ನಿಮ್ಮ ನಿರೀಕ್ಷೆಗೂ ಮೀರಿದೆ. ಇಂತಹ ಬೆಕ್ಕುಗಳಿಗೆ ಗಂಟೆ ಕಟ್ಟಲು ಮುಂದಾಗುವಿರೇ?

'ರಾಷ್ಟ್ರೀಯ ಶಿಕ್ಷಣ ನೀತಿ-2019'ರ ಕರಡನ್ನು ಕೇಂದ್ರ ಸರಕಾರ ಸಾರ್ವಜನಿಕಗೊಳಿಸಿತ್ತು. ಸಲಹೆ ಸೂಚನೆಗಳನ್ನು ಸಂಸ್ಥೆಗಳು, ಶಿಕ್ಷಣ ತಜ್ಞರು, ರಾಜ್ಯ ಸರಕಾರಗಳು ಮತ್ತು ವೈಯಕ್ತಿಕವಾಗಿ ಸಹ ನೀಡಬಹುದು ಎಂದು ಎರಡೂವರೆ ತಿಂಗಳು ಕಾಲಾವಕಾಶ ನೀಡಿತ್ತು. ರಾಜ್ಯ ಸರಕಾರದ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಜಾಲತಾಣಗಳನ್ನು ಶೋಧಿಸಿದರೂ ರಾಷ್ಟ್ರೀಯ ಶಿಕ್ಷಣ ನೀತಿಯಂತಹ ಮಹತ್ತರ ವಿಷಯದ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲ. ಅಧಿಕಾರಿಗಳಿಗೇಕೆ ಇಷ್ಟೊಂದು ನಿರಾಸಕ್ತಿ ಸರ್ ?

ನಮ್ಮ ಪಠ್ಯಪುಸ್ತಕಗಳಂತೂ ಮುಖರ್ಜಿಗಳು, ಥಾಪರ್‌ಗಳು, ಹಬೀಬ್‌ಗಳ ಚಿಂತನೆಗಳಿಂದಲೇ ತುಂಬಿದೆ. ಇಂತಹ ಹಳಸಲು ಮತ್ತು ವೈಜ್ಞಾನಿಕ ಪುರಾವೆಗಳೇ ಇಲ್ಲದ ಪಠ್ಯಗಳನ್ನು ಎಷ್ಟು ದಿನ ಅಂತ ಸಾರ್ ಕಲಿಯೋದು? ಮೋದಿ 1.0 ಸರಕಾರದಲ್ಲಿ ಮಾನವ ಸಂಪನ್ಮೂಲ ಸಚಿವರಾಗಿದ್ದ ಜಾವಡೇಕರ್‌ರರು 'ಯಾವುದೇ ಪಠ್ಯಪುಸ್ತಕದ ಒಂದು ಸಾಲನ್ನು ನಾವು ಬದಲಾಯಿಸಿಲ್ಲ' ಎಂದು ಹೇಳಿ ತಾವೊಬ್ಬ ಸೆಕ್ಯುಲರ್ ಎಂದು ಹಣೆಪಟ್ಟಿ ಕಟ್ಟಿಕೊಂಡರು. ಆದರೆ ತಪ್ಪಿರುವುದನ್ನು ಬದಲಾಯಿಸುವುದು ತಪ್ಪಲ್ಲ, ಅದು ಮಾಡಲೇಬೇಕಾದ ಕೆಲಸ ಅಲ್ಲವೆ? ಅಲ್ಲದೇ ಈಗಿರುವ ಪಠ್ಯಗಳು ಬಹಳ ಅಧಿಕವಾದವೆಂದು ವರ್ಷಂಪ್ರತಿ ಶೇ.10ರಷ್ಟು ಪಠ್ಯವನ್ನು ಕಡಿತಗೊಳಿಸಿ ಒಟ್ಟಾರೆ ಶೇ.40 ರಷ್ಟು ಪಾಠವನ್ನು ಕಡಿತಗೊಳಿಸಿ ಅದೇ ಸಮಯವನ್ನು ವಿದ್ಯಾರ್ಥಿಗಳ ಕ್ರೀಡಾ ಮತ್ತು ಇನ್ನಿತರೆ ಚಟುವಟಿಕೆಗಳಿಗೆ ಮೀಸಲಿಡುತ್ತೇನೆಂದು ಜಾವಡೇಕರ್‌ರು ಘೋಷಿಸಿದ್ದಷ್ಟೆ. ಆದರೆ ಯಾವುದೇ ಪಠ್ಯದ ಒಂದು ಸಾಲೂ ಕಡಿತಗೊಳ್ಳಲಿಲ್ಲ. ನೀವಾದರೂ ಮಾಡಿ ಪುಣ್ಯಕಟ್ಟಿಕೊಳ್ಳಿ ಸರ್.

ಏಳನೇ ತರಗತಿಗೆ ಈ ವರ್ಷದಿಂದಲೇ ಪಬ್ಲಿಕ್ ಪರೀಕ್ಷೆಯೆಂದು ಘೋಷಿಸಿದಿರಿ, ಸಂತೋಷ. ಇದರಿಂದ ಶಿಕ್ಷಣದ ಗುಣಮಟ್ಟ ವೃದ್ಧಿಸುತ್ತದೆ ಎಂದರೆ ಒಳ್ಳೆಯದೇ. ಆದರೆ 10ನೇ ಕ್ಲಾಸಿನಲ್ಲಿ 'ಕಾಪಿ' ಹೊಡೆಯಲು ತಯಾರಾಗುತ್ತಿದ್ದ ಪ್ರಭೃತಿಗಳು ಮೂರು ವರ್ಷದ ಮೊದಲೇ ಕಾಪಿಗೆ ತಯಾರಾಗಬಾರದು ಅಷ್ಟೆ. ಈ ದಿಕ್ಕಿನಲ್ಲಿ ನೈತಿಕ ಶಿಕ್ಷಣ ಬಹಳ ಮುಖ್ಯ.

ಶಿಕ್ಷಣ ಪದ್ಧತಿಗಳಲ್ಲೇ ಅತ್ಯುನ್ನತ ಮತ್ತು ಪರಿಣಾಮಕಾರಿ ಪದ್ಧತಿಯೆಂದರೆ ಪ್ರಾಚೀನ 'ಗುರುಕುಲ' ಪದ್ಧತಿಯೆಂದು ಯಾರಾದರೂ ಒಪ್ಪುತ್ತಾರೆ. ಇಂದಿಗೂ ಅನೇಕ ಪೋಷಕರು ತಮ್ಮ ಮಕ್ಕಳಿಗೆ ಗುರುಕುಲ ಪದ್ಧತಿಯ ಶಿಕ್ಷಣವನ್ನು ನೀಡಬಯಸುತ್ತಾರೆ. ಆದರೆ ಅದಕ್ಕೆ ಮಾನ್ಯತೆಯೇ ಇಲ್ಲ ಎಂಬುದೇ ಅವರ ಚಿಂತೆ. ಹೀಗಾಗಿ ಹಿಂಜರಿಯುತ್ತಾರೆ. ಇಂದಿಗೂ ಅನೇಕ ಸಂಸ್ಥೆಗಳು ಮತ್ತು ವ್ಯಕ್ತಿಗಳು ಗುರುಕುಲ ಶಿಕ್ಷಣ ಪದ್ಧತಿಯನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದಿದ್ದಾರೆ. ತಾವು ವಿಶಾಲ ಮನಸ್ಸಿನಿಂದ ಇಂತಹ ಗುರುಕುಲ ಮಾದರಿಯನ್ನು ಮಾನ್ಯ ಮಾಡಿ ಅದಕ್ಕೊಂದು ಮಂಡಳಿಯೋ ಅಥವಾ ಇನ್ಯಾವುದೋ ರೀತಿಯಲ್ಲೋ ಸಾಂಸ್ಥಿಕ ರೂಪವನ್ನು ಕೊಟ್ಟು ಗುರುಕುಲ ಪದ್ಧತಿಯನ್ನು ಪ್ರೋತ್ಸಾಹಿಸಬಹುದಲ್ಲವೆ?

ಶಿಕ್ಷಣವೆಂಬುದು ಕೇವಲ ಉದರ ಪೋಷಣೆಗಲ್ಲ, ಬದುಕು ಉದರ ಪೋಷಣೆಯನ್ನು ತಂತಾನೆ ಕಲಿಸಿಬಿಡುತ್ತದೆ. ಅಶಿಕ್ಷಿತರಲ್ಲಿ ನ್ಯಾಯ ಮಾರ್ಗದಲ್ಲೇ ಶಿಕ್ಷಿತರಿಗಿಂತ ಹೆಚ್ಚು ಸಂಪಾದಿಸುವ ಅನೇಕರಿದ್ದಾರೆ. ಆದರೆ ಶಿಕ್ಷಣ ಮನುಷ್ಯನ ಉನ್ನತೀಕರಣಕ್ಕಾಗಿ, ಸ್ವಯಂ ಶೋಧನೆಗಾಗಿ, ಸ್ವಸಂಸ್ಕೃತಿ, ಸ್ವಭಾಷೆ, ಸ್ವರಾಷ್ಟ್ರದ ಉನ್ನತಿಗಾಗಿ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕರೇ ತಮ್ಮ ವಿಜಯದಶಮಿ ಭಾಷಣದಲ್ಲಿ ಹೇಳಿದ್ದಾರೆ. ಅದು ನಿಜವೂ ಹೌದು. ಕಾಡು ಅಥವಾ ಮರುಭೂಮಿಯಲ್ಲಿ ಬಿಟ್ಟರೂ ಅಲ್ಲೇ ಸಾಮ್ರಾಜ್ಯವೊಂದನ್ನು ಕಟ್ಟುವೆ ಎಂಬುವ ಆತ್ಮವಿಶ್ವಾಸವನ್ನು ಕೊಡುವುದೇ ಶಿಕ್ಷಣ. ಅಂತಹ ಶಿಕ್ಷಣ ವ್ಯವಸ್ಥೆಯನ್ನು ನಿಮ್ಮ ನೇತೃತ್ವದಲ್ಲಿ ಕರ್ನಾಟಕದಲ್ಲಿ ಕಲ್ಪಿಸಿಕೊಳ್ಳಬಹುದೇ ಸಾರ್?

ಶಾಲೆ ಸೇರಿ 10-12ವರ್ಷ ಶಿಕ್ಷಣ ಪಡೆದರೂ ನಕಲು ಮಾಡಬಾರದು ಎಂಬ ನೈತಿಕತೆಯನ್ನು ನಮ್ಮ ಶಿಕ್ಷಣ ವ್ಯವಸ್ಥೆ ತುಂಬದೇ ಹೋಗಿದೆ. ಇದೆಲ್ಲ ಅಂಕ ಗಳಿಕೆಯ ಹಿಂದೆ ಬಿದ್ದುದರ ಫಲಿತಾಂಶ. ಇಲಾಖೆ ತಮ್ಮಿಂದ ಸಮಗ್ರ ಬದಲಾವಣೆಯನ್ನು ಬಯಸುತ್ತಿದೆ (ಬದಲಾವಣೆ ಎಂದರೆ ಎಚ್.ವಿಶ್ವನಾಥ್‌ರ ರೀತಿಯಲ್ಲ).

ನೈತಿಕ ಶಿಕ್ಷಣ, ಪರಿಸರ ಶಿಕ್ಷಣ, ಯೋಗ , ಕ್ರೀಡೆ, ಕಲೆ, ಸಂಗೀತ-ಸಾಂಸ್ಕೃತಿಕ ವಿಚಾರಗಳು ಶಿಕ್ಷಣದಲ್ಲಿ ಮೇಳೈಸಬೇಕಾಗಿದೆ. ಕೇವಲ ಅಂಕ ಗಳಿಕೆಗೋಸ್ಕರ ಅದೇ ಹಳಸಲು ಅಸೈನ್‌ಮೆಂಟ್‌ಗಳು, ಪ್ರಾಜೆಕ್ಟ್‌ಗಳು, ಇಂಟರ್ನಲ್ ಅಸೆಸ್‌ಮೆಂಟ್‌ಗಳಿಗೆ ತಿಲಾಂಜಲಿ ಹೇಳಿ ಹೊಸ ರೀತಿಯ ಶಿಕ್ಷಣ ಮತ್ತು ಅದಕ್ಕೆ ತಕ್ಕ ಪಠ್ಯಕ್ರಮ ನಿಮ್ಮ ಕಾಲದಲ್ಲಿ ಆಗಲಿ. ನೀವಲ್ಲದೇ ಬೇರೆಯವರು ಇವೆಲ್ಲ ಮಾಡುತ್ತಾರೆ ಎಂಬ ನಂಬಿಕೆ ಬರದು. ನಿಮ್ಮಲ್ಲಿ ಆ ಕ್ಷಮತೆ ಇದೆ. ಒಬ್ಬ ಸಂವೇದನಾಶೀಲ, ಸುಸಂಸ್ಕೃತ, ಸಜ್ಜನ, ಅಧ್ಯಯನಶೀಲ, ಶುದ್ಧಹಸ್ತ ರಾಜಕಾರಣಿಯಾದ್ದರಿಂದ ಮತ್ತು ನಿಮ್ಮಲ್ಲಿ ಅತ್ಯಂತ ವಿಶ್ವಾಸವಿರುವುದರಿಂದ ನಿವೇದಿಸಿಕೊಳ್ಳುತ್ತಿದ್ದೇನೆ. ಈ ಎಲ್ಲಾ ಸಂಗತಿಗಳನ್ನು ಗಣನೆಗೆ ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ. ವಂದನೆಗಳು.